ದಿನಾಂಕಃ **09.07.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ **ಜೆ.ಎನ್** ರವರಿಂದಃ

ವಾದಿಯು ನಿಪಿ-**31** ರಿಟ್ ಅರ್ಜಿಗೆ ಪಕ್ಷಗಾರರು ಆಗಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ವಿಜಯಲಕ್ಷ್ಮಿಯು ನಿಪಿ-**31** ರಿಟ್ ಅರ್ಜಿಗೆ ಪಕ್ಷಗಾರರು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-**31** ಮತ್ತು **32** ದಾಖಲೆ ಪ್ರಕರಣಗಳು ನಾಗರಾಜ್ ರವರು ಪಕ್ಷಗಾರರು ಆಗಿದ್ದರು ಎಂದರೆ ಸರಿ. ನಿಪಿ-**31** ಮತ್ತು ನಿಪಿ-**32** ದಾಖಲೆಗಳಲ್ಲಿ ಇರುವ ಪ್ರಕರಣದಲ್ಲಿ ಹೊರ ಬಂದ ತೀರ್ಪು ಸದರಿ ಪ್ರಕರಣದ ಪಕ್ಷಗಾರರಿಗೆ ಮಾತ್ರ ಅನ್ವಯಿಸುತ್ತದೆ ಎಂದರೆ ಸರಿಯಲ್ಲ. ನಿಪಿ-**32** ದಾಖಲೆಯಲ್ಲಿ ಇರುವ ಪ್ರಕರಣದಲ್ಲಿ ಹೊರ ಬಂದಿರುವ ತೀರ್ಪಿನ ಸಂಪುಟ ಸಂ.**77** ರಲ್ಲಿ ಸದರಿ ಪ್ರಕರಣದ ತೀರ್ಪು ಪ್ರಕರಣದಲ್ಲಿ ಇರುವ ಪಕ್ಷಗಾರರರಿಗೆ ಮಾತ್ರ ಅನ್ವಯಿಸುತ್ತದೆ ಎನ್ನುವ ಅಂಶಯು ಅಡಕಗೊಂಡಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿ ನಾನು ಪ್ರತಿನಿದಿಸುವ ಸೊಸೈಟಿರವರು ಸುಳ್ಳು ಪ್ರಕರಣವನ್ನು ನ್ಯಾಯಾಲಯಕ್ಕೆ ಹೂಡುತ್ತಿದ್ದೇವೆ ಎಂದು ಹೇಳಿ ರೂ.**1** ಲಕ್ಷ ದಂಡ ವಿದಿಸಿರುತ್ತಾರೆ ಎಂದರೆ ಸರಿಯಲ್ಲ. **1743/2013** ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದವರು ನಾನು ಪ್ರತಿನಿದಿಸುವ ಸೊಸೈಟಿರವರ ವಿರುದ್ದ ರೂ.**1** ಲಕ್ಷ ದಂಡ ವಿದಿಸಿರುತ್ತಾರೆ ಎಂದರೆ ಸಾಕ್ಷಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದು

ನುಡಿಯುತ್ತಾರೆ. ನಾನು ಪ್ರತಿನಿದಿಸುವ ಸೊಸೈಟಿರವರು ಭಾರತದ ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿ ಆರ್. ಎಫ್ ಎ ತೀರ್ಪನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ಸದರಿ ತೀರ್ಪನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-**6** ಎಂದು ಗುರುತಿಸಲಾಯಿತು. ಸರ್ವೆ ನಂ.**41** ಮತ್ತು **42** ಜಮೀನಿಗೆ ಸಂಬಂಧಿಸಿ ನಾನು ಪ್ರತಿನಿದಿಸುವ ಸೊಸೈಟಿಗೆ ಮಾಡಿಕೊಡಬೇಕು ಎಂದು ತಾಹಶೀಲ್ದಾರ್ ರವರಿಗೆ ಒಂದು ಪತ್ರವನ್ನು ಬರೆಯಲಾಗಿತ್ತು ಎಂದರೆ ಸರಿಯಲ್ಲ. ಸರ್ಕಾರಕ್ಕೆ ನಾನು ಪ್ರತಿನಿದಿಸುವ ಸೊಸೈಟಿರವರು ನಷ್ಟ ಭರ್ತಿ ಪರಿಹಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.**41** ಮತ್ತು **42** ಜಮೀನಿನ ಭೂ ಮಿಗೆ ಸಂಬಂಧಿಸಿ ನಾವು ರಾಜ್ಯ ಸರ್ಕಾರದಲ್ಲಿ ಭೂ ಮಾಲೀಕರಿಗೆ ಹಣ ನೀಡಲು ಠೇವಣಿ ಇಟ್ಟಿದ್ದೇವು ಎಂದರೆ ನನಗೆ ನೆನಪಿಲ್ಲ, ಸದರಿ ಹಣವನ್ನು ಭೂ ಸ್ವಾಧೀನ ರದ್ದುಗೊಂಡ ನಂತರ ರಾಜ್ಯ ಸರ್ಕಾದಿಂದ ಸೊಸೈಟಿರುವರು ವಾಪಸ್ಸು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಿಪಿ-**33** ರಿಂದ **38** ದಾಖಲೆಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ನಾವೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-**39** ದಾಖಲೆಯಂತೆ ಇರುವ ಪ್ರಕರಣಕ್ಕೆ ಕಿಡಿಯಪ್ಪ ಮತ್ತು ಅವರ ಕುಟುಂಬಸ್ದರು ನ್ಯಾಯಾಲಯಕ್ಕೆ ಹಾಜರು ಆಗಿಲ್ಲ ಎಂದರೆ ಸಾಕ್ಷಿಯು ಅವರ ಪರವಾಗಿ ಜಿಪಿಎ ಹೊಲ್ಡಂರ್ ರವರು ಹಾಜರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ಕಿಡಿಯಪ್ಪ ರವರ ಜಿಪಿಎ ಹೊಲ್ಡರ್ ಆಗಿದ್ದರು.

O.S. 1797/2014

PW3

ಸದರಿ ಬಸವರಾಜ್ ಪ್ಯಾಟಿ ರವರು ನಾನು ಪ್ರತಿನಿದಿಸುವ ಸೊಸೈಟಿಯ ಸದಸ್ಯರಾಗಿದ್ದರು. ನಿಪಿ-**39** ದಾಖಲೆಯಲ್ಲಿ ಇರುವ ಪ್ರಕರಣವನ್ನು ನಾವು ಮತ್ತು ನಮ್ಮ ಸೊಸೈಟಿಗೆ ಸಂಬಂಧಿಸದ ಸ್ವತ್ತುಗಳ ಮೇಲೆ ಹೂಡಲಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತನ್ನು ನೀಡಲು ಸ್ವತಹ ನನಗೆ ಮತ್ತು ನಾನು ಪ್ರತಿನಿದಿಸುವ ಸೊಸೈಟಿಗೆ ದಾವಾ ಸ್ವತ್ತಿನ ಮೇಲೆ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನ ಕೋರಿ ನಾವು ಸ್ವತಹ ರಾಜ್ಯ ಸರ್ಕಾರಕ್ಕೆ ದಿಃ**04.09.1992,** ದಿಃ**09.10.2002** ಮತ್ತು **19.01.2004** ರಂದು ಪತ್ರ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಸ್ವಾಧೀನ ಅನುಭವನ್ನು ಬಿಟ್ಟು ಕೊಡಲು ರಾಜ್ಯ ಸರ್ಕಾರದವರು ನಮ್ಮ ಸೊಸೈಟಿಗೆ ಮರು ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.